ಓ. ಎಸ್ . 73/2022 ಪಿ.ಡಬ್ಲ್ಯೂ - 1 ಕುಮಾರ ಜೊಗಳೇಕರ

( ದಿನಾಂಕ 04-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದ -**

1. ದಾವೆ ಹಾಕಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ವಾದಪತ್ರವನ್ನು ನಾನು ಓದಿಲ್ಲ. ನನ್ನ ವಕೀಲರೂ ಸಹ ನನಗೆ ಓದಿ ಹೇಳಿರುವುದಿಲ್ಲ. ವಾದ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ವಾದ ಪತ್ರದ ಜೊತೆಗೆ ಇರುವ ಹಾತ್ ನಾಕಶೆಗೆ ನಾನು ಸಹಿ ಮಾಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿ.ಡಿ-1(ಎ) ಎಂದು ಗುರುತಿಸಲಾಯಿತು. ದಾವಾ ಸರ್ವೆ ನಂ. 208/5. ನನಗೆ ಕನ್ನಡ ಓದಲು ಬರುವುದಿಲ್ಲ , ಮರಾಠಿ ಓದುತ್ತೇನೆ. ಇಂಗ್ಲೀಷ ಅಂಕಿಗಳನ್ನು ಓದುತ್ತೇನೆ. ನಿ.ಡಿ-1 ರ ಹಾತ್ ನಕಾಶೆಯಲ್ಲಿ ಸರ್ವೆ ನಂ. 63/2 ಎಂದು ನಮೂದು ಆಗಿದೆ . ಹಾತ್ ನಕಾಶೆಯಲ್ಲಿ ತೊರಿಸಿದ ಸರ್ವೆ ನಂ. 63/2 ರ ಉತಾರವನ್ನು ಹಾಜರ ಮಾಡಿದ್ದೇನೆ . ದಾವೆಯಲ್ಲಿ ಬರೆದಂತಹ ಸರ್ವೆ ನಂಬರಿಗೂ ಹಾಗೂ ಹಾತ್ ನಕಾಶೆಯಲ್ಲಿ ತೋರಿಸಿದ ಸರ್ವೆ ನಂಬರಗೂ ವ್ಯತ್ಯಾಸ ಇದೆ ಎಂದರೆ ಹೌದು . ದಾವಾ ಸ್ವತ್ತಿನ ಪೂರ್ವಕ್ಕೆ ಹಂಚಾಳೆ ಬಾಬು ಇವರ ಜಮೀನು , ಪಶ್ಚಿಮಕ್ಕೆ ಸಾಲಿಮನಿ ಇವರ ಜಮೀನು , ನನಗೆ ಯಾವ ಸಾಲಿಮನಿ ಎಂದು ಅವರ ಹೆಸರು ಹೇಳಲು ಬರುವುದಿಲ್ಲ. ದಕ್ಷಿಣಕ್ಕೆ ರಸ್ತೆ ಇದೆ ಹಾಗೂ ಉತ್ತರಕ್ಕೆ ಸರಕಾರಿ ಗ್ರಾಮ ಠಾಣಾ ಇದೆ.

2. ನಾನು ಚೆಕ್ಕುಬಂದಿಯನ್ನು ವಾದಪತ್ರದದಲ್ಲಿ ಎಲ್ಲಿಯೂ ತೋರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚೆಕ್ಕುಬಂದಿಯನ್ನು ವಕೀಲರಿಗೆ ಹೇಳಲು ನನಗೆ ಅಡಚಣೆ ಇರಲಿಲ್ಲ. ಮೇಲೆ ಹೇಳಿದ ಚೆಕ್ಕುಬಂದಿ ದಾವಾ ಆಸ್ತಿಗೆ ಸಂಬಂಧ ಪಟ್ಟಿದ್ದು . ನಾನು ಹಾತ್ ನಕಾಶೆಯಲ್ಲಿ ಒಂದು ಸರ್ವೆ ನಂಬರ ಹಾಗು ದಾವೆ ವಾದ ಪತ್ರದಲ್ಲಿ ಒಂದು ಸರ್ವೆ ನಂಬರ ತೊರಿಸಿದ್ದು ನಾನು ದಾವಾ ಆಸ್ತಿಯ ಕಬ್ಜಾ ವೈವಾಟಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ಆಜು ಬಾಜು ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. ಸುಮಾರು 15 ವರ್ಷಗಳಿಂದ ನಾನು ಹುಲ್ಲೋಳಿಯಲ್ಲಿ ವಾಸವಾಗಿದ್ದೇನೆ. ಹಿಸ್ಸಾ ನಂ. 258/5 ಪ್ರತಿವಾದಿ ನಂ. 1 ರಿಂದ 4 ಮತ್ತು ಅವರ ಮನೆತನಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ. ನಂ. 258/5 ರ ಪಟ್ಟಿ ಪೂರ್ವ ಪಶ್ಚಿಮವಾಗಿದೆ. ಸದರಿ ಜಮೀನು ಮೊದಲು ಮಳೆ ಆಧಾರಿತ ಜಮೀನು ಆಗಿದ್ದು ಈಗ ನೀರಾವರಿ ಜಮೀನು ಆಗಿದೆ. ಸದರಿ ಜಮೀನು ಪ್ರತಿವಾದಿ ನಂ. 1 ರಿಂದ 4 ಇವರ ಮಾಹಾರಕಿ ವತನ್ ಜಮೀನು ಆಗಿದೆ ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಯರ ಅಜ್ಜ ಹಾಲಪ್ಪ ಬಸಪ್ಪ ಹೊಲೇರ @ ಸಾಲಿಮನಿ ಇವರ ಹೆಸರಿನಲ್ಲಿ 1961 ಕ್ಕಿಂತ ಮುಂಚಿತವಾಗಿ

ದಾವಾ ಜಮೀನು ದಾಖಲ ಆಗಿತ್ತು ಎಂದರೆ ಸರಿಯಲ್ಲ. ಮೈಸೂರು ಸರಕಾರದ ಅವಧಿಯಲ್ಲಿ 1961 ರಲ್ಲಿ ವತನ್ ಭೂಮಿ ರದ್ದು ಮಾಡಿ ಅದನ್ನು ಸರಕಾರ ಎಂದು ಉತಾರದಲ್ಲಿ (resume) ರೆಜೂಮ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು 1 ರಿಂದ 4ನೇ ಪ್ರತಿವಾದಿಯರ ಅಜ್ಜ ನ ಹೆಸರಿನಲ್ಲಿ ರಿಗ್ರ್ಯಾ ಂಟ ಮಾಡುವ ಸಲುವಾಗಿ ರೆವಿನ್ಯೂ ಇಲಾಖೆಗೆ ಪ್ರಸ್ತಾವಣೆ ಸಲ್ಲಿಸಲಾಗಿತ್ತು ಎಂದರೆ ಸಾಕ್ಷಿ ನಮ್ಮ ಅಜ್ಜ ಹಾಲಪ್ಪ ಬಸಪ್ಪ ಜೊಗಳೇಕರ ಎಂದು ಇತ್ತು ಎಂದು ಹೇಳುತ್ತಾರೆ .

3. ತಾಯಪ್ಪ , ಸದಾಶಿವ , ಮಹಾದೇವ , ರವೀಂದ್ರ , ಸಾತಬಾಳವ್ವ , ಬಸವರಾಜ , ಲಕ್ಷ್ಮಣ , ಶೋಭಾ , ಸದಾಶಿವ ಭೀಮಪ್ಪ ಸಾಲಿಮನಿ , ತಾಯಪ್ಪ , ದ್ರಾಕ್ಷಾ ಯಣಿ , ಮಹಾದೇವಿ , ಸಂಗೀತಾ , ಈಶ್ವರ , ಶಿವಾನಂದ ಎಲ್ಲರೂ ಕೂಡಿಕೊಂಡು ನನ್ನ ವಿರುದ್ದ ಅಸಲ ದಾವೆ ನಂ. 114/2015 ಎಂದು ಘೋಷನಾತ್ಮಕ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಹಾಕಿದಂತಹ ತಕರಾರುಗಳನ್ನು ನಾನು ಓದಿ ನೋಡಿರುವುದಿಲ್ಲ. ತಕರಾರು ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆ ಆ ದಾವೆಯಲ್ಲಿ ನನಗೆ ಸಮನ್ಸ ಹೋದಾಗ ನಾನು ಊರಲ್ಲಿ ಇಲ್ಲ ಎಂದು ರಿಪೋರ್ಟ ಬಂದಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ . ಆ ಕೇಸಿನಲ್ಲಿ ವಾದಿಯರು ನನ್ನ ವಿರುದ್ಧ ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸ ಹೊರಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ನಾನು ವವರ ಕಬ್ಜಾ ವೈವಾಟಿಗೆ ಹರಕತ ಮಾಡಿದಾಗ ಮೇಲೆ ಹೇಳಿದಂತೆ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

4. ಸದರಿ ದಾವಾ ಆಸ್ತಿಯ ಮೇಲೆ ಪ್ರತಿವಾದಿ ಅಜ್ಜನ ಹೆಸರು ಇದ್ದು ಅವರ ಅಜ್ಜನ ಹೆಸರು ಮತ್ತು ನನ್ನ ಅಜ್ಜನ ಹೆಸರು ಒಂದೇ ಇರುವುದರಿಂದ ಅದನ್ನು ದುರುಪಯೋಗ ಪಡಿಸಿಕೊಂಡು ನಾನು ನನ್ನ ಅಜ್ಜನ ಹೆಸರಿನಲ್ಲಿ ಡೈರಿ ಹಚ್ಚಿ ಸಿಕೊಂಡಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿ ಮೊದಲಿನಿಂದಲೂ ಪ್ರತಿವಾದಿಯರ ಕಬಜಾದಲ್ಲಿದೆ ಎಂದರೆ ಸಾಕ್ಷಿ ನಮ್ಮ ಕಬಜಾದಲ್ಲಿ ಇದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಮೊದಲಿನಿಂದಲೂ ಆ ಜಮೀನಿನಲ್ಲಿ ತೊಗರಿ , ಶೆಂಗಾ , ಸಜ್ಜಿ ಬೆಳೆಯುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಆ ಜಮೀನಿನಲ್ಲಿ ಏನು ಬೆಳೆಯುತ್ತೇನೆ ಎಂದು ನಾನು ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಪ್ರತಿವಾದಿಯ ತಂದೆ ಮತ್ತು ಅಜ್ಜ ವ್ಯವಸಾಯ ಬಿಟ್ಟು ಬೇರೆ ಏನೂ ಕೆಲಸ ಮಾಡುತ್ತಿರಲಿಲ್ಲ ಎಂದರೆ ನಿಜ . ಸರ್ವೆ ನಂ 258/1, 2, 3, 4, 5, 8, 9, 10 ಪ್ರತಿವಾದಿಯರ ಮನೆತನದ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅದರಲ್ಲಿ 5ನೇ ಹಿಸ್ಸಾ ನಮ್ಮ ಹೆಸರಿನಲ್ಲಿ ಇದೆ ಎಂದು

ಹೇಳುತ್ತಾರೆ. ಪ್ರತಿವಾದಿಯರೆ ದಾವಾ ಜಮೀನಿನ ಮಾಲೀಕರು ಮತ್ತು ಕಬಜಾ ವೈವಾಟುದಾರರು ಎಂದು ಈ ಹಿಂದಿನ ದಾವೆಯಲ್ಲಿ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಹುಲ್ಲೋಳಿ ಊರಲ್ಲಿ ವಾಸವಾಗಿರುತ್ತಿರಲಿಲ್ಲ , ಆದ್ದರಿಂದ ನಾನು ಆ ಕೇಸಿನಲ್ಲಿ ಪ್ರೊಸೆಸ್ ಸರ್ವರ ಬಂದಾಗ ಊರಲ್ಲಿ ಇಲ್ಲ ಎಂದು ನಮೂದು ಆಗಿತ್ತು , ಮತ್ತು ಅದೇ ಕಾರಣಕ್ಕಾಗಿ ಪತ್ರಿಕಾ ಪ್ರಕಟಣೆ ತೆಗೆದುಕೊಳ್ಳಲಾಗಿತ್ತು ಎಂದರೆ ಸರಿಯಲ್ಲ.

6. ದಾವೆ ಹಾಕುವ ಮಂಚಿತವಾಗಿ ಪ್ರತಿವಾದಿಯುರು ನನಗೆ ಬಂದು ಭೇಟಿ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ನನಗೆ OS No. 114/2015 ಹಾಕುವ ಸಮಯದಲ್ಲಿ ಆ ಸಮಯದಲ್ಲಿ ಭೇಟಿ ಆಗಿ ಅದರಲ್ಲಿ ನನ್ನ ತಂದೆ ತನ್ನ ಹೆಸರನ್ನು ಮತ್ತು ನನ್ನ ಅಜ್ಜನ ಹೆಸರನ್ನು ರೆವಿನ್ಯೂ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಹಚ್ಚಿಸಿಕೊಂಡಿದ್ದನ್ನು ಕಡಿಮೆ ಮಾಡಿ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ನಾನು ಆಗ ಹೆಸರು ಕಡಿಮೆ ಮಾಡುವುದಿಲಲ್ಲ ಎಂದು ಇನಕಾರ ಮಾಡಿದ್ದೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗಾಗಲೀ ಮತ್ತು ಪ್ರತಿವಾದಿಯರ ಕುಟುಂಬಕ್ಕಾಗಲೀ ಯಾವುದೇ ಸಂಬಂಧ ಇಲ್ಲ ಎಂದರೆ ನಿಜ. 15-20 ವರ್ಷಗಳ ಹಿಂದೆ ಪ್ರತಿವಾದಿಯರು ಆ ಜಮೀನಿನಲ್ಲಿ ಭಾವಿ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಆ ಭಾವಿಗೆ 2ನೇ ಪ್ರತಿವಾದಿಯ ಹೆಸರಿನಲ್ಲಿ ವಿಧ್ಯುತ ಕನೆಕ್ಷನ ಇದೆ ಎಂದರೆ ಸರಿಯಲ್ಲ. ಅದೇ ಜಮೀನಿನಲ್ಲಿ ಸಾಲಿಮನಿ ಇವರ ಮನೆತನದವರನ್ನು ದಫನ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬ್ಜಾದಲ್ಲಿ ಯಾವತ್ತೂ ಇಲ್ಲ ಹಾಗೂ ಈ ದಾವೆ ಹಾಕಲು ನನಗೆ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ಈ ದಾವೆ ಹಾಕುವ ಮುಂಚಿತವಾಗಿಯೂ ಹಾಗೂ ಈಗಲೂ ಸಹ ಪ್ರತಿವಾದಿಗಳೇ ದಾವಾಸ್ತಿಯ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. 2015 ರಲ್ಲಿ ಈ ದಾವೆ ಹಾಕಲು ಕಾರಣ ಉಂಟಾಯಿತು. ನನಗೆ ದಾವಾಸ್ತಿಯ ಮೇಲೆ ಯಾವುದೇ ಸಂಬವಂಧ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಕೇಸ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯ ವರ್ಣನೆಯನ್ನು ಎಲ್ಲಿಯೂ ಮಾಡಿಲ್ಲ ಎಂದರೆ ಸರಿಯಲ್ಲ.

7. ನಾನು ಹೇಳಿದ ಚೆಕ್ಕುಬಂದಿಯ ಪ್ರಕಾರ ಸರ್ವೆ ನಂ. 258 / 5 ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬಜಾದಲ್ಲಿ ಇಲ್ಲದೇ ಇರುವುದರಿಂದ ಅದರ ಚೆಕ್ಕುಬಂದಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲ ಯಾವತ್ತೂ ಬೆಳೆ ಮಾಡಿಲ್ಲ , ಆದ್ದರಿಂದ ನಾನು ವಾದಪತ್ರದಲ್ಲಿ ಬೆಳೆಗಳ ಬಗ್ಗೆ ಏನೂ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಪೈಪಲೈನ ಹಾಕಿಕೊಂಡು ನೀರಾವರಿ ವ್ಯವಸ್ಥೆ ಮಾಡಿಕೊಂಡಿದ್ದಾರೆ ಎಂದರೆ ಅಲ್ಲಿ ಪೈಪಲೈನ

ಇಲ್ಲ ಎಂದು  ಹೇಳುತ್ತಾರೆ.  ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು  ವಿಚಾರಣೆ ಇರುವುದಿಲ್ಲ.

**( ಸಾಕ್ಷಿಯ ಹೇಳಿಕೆಯನ್ನು  ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು  ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ